# ಇ–ಆಡಳಿತ ಮತ್ತು ನಾಗರಿಕ ಸಮಾಜ: ಉತ್ತಮ ಆಡಳಿತದ ನವ ದಿಕ್ಕು

ಉಷಾ ಎಂ.ಆರ್.
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಎ.ವಿ.ಕಮಲಮ್ಮ ಮಹಿಳಾ ಕಾಲೇಜು, ದಾವಣಗೆರೆ.

DOI: https://doi.org/10.5281/zenodo.18850660

## ABSTRACT:

ಇ–ಆಡಳಿತವು (ಇ–ಗವರ್ನೆನ್ಸ್) ಸರ್ಕಾರದ ಸೇವೆಗಳು ಮತ್ತು ಮಾಹಿತಿಯನ್ನು ಡಿಜಿಟಲ್ ತಂತ್ರಜ್ಞಾನಗಳ ಮೂಲಕ ನಾಗರಿಕರಿಗೆ ಸುಲಭ, ವೇಗವಾದ ಮತ್ತು ಪಾರದರ್ಶಕ ರೀತಿಯಲ್ಲಿ ಒದಗಿಸುವ ವ್ಯವಸ್ಥೆಯಾಗಿದೆ. ಭಾರತದಲ್ಲಿ ಡಿಜಿಟಲ್ ಇಂಡಿಯಾ ಮತ್ತು ನ್ಯಾಷನಲ್ ಇ–ಗವರ್ನೆನ್ಸ್ ಪ್ಲಾನ್‌ನಂತಹ ಕಾರ್ಯಕ್ರಮಗಳು ಆಡಳಿತವನ್ನು ಡಿಜಿಟಲ್ ದಿಕ್ಕಿನಲ್ಲಿ ರೂಪಾಂತರಗೊಳಿಸಿವೆ. ಈ ಪರಿವರ್ತನೆಯಲ್ಲಿ ನಾಗರಿಕ ಸಮಾಜವು ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಿ, ಜಾಗೃತಿ ನಿರ್ಮಾಣ, ಡಿಜಿಟಲ್ ಸಾಕ್ಷರತೆ ವೃದ್ಧಿ, ನೀತಿ ರೂಪಣೆಯಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಸಾಮಾಜಿಕ ನಿಗಾವಳಿ ಮೂಲಕ ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ. ಈ ಲೇಖನವು ಇ–ಆಡಳಿತದ ಯಶಸ್ಸಿನಲ್ಲಿ ನಾಗರಿಕ ಸಮಾಜದ ಪಾತ್ರವನ್ನು ವಿಶ್ಲೇಷಿಸಿ, ಡಿಜಿಟಲ್ ಅಂತರ ಕಡಿಮೆ ಮಾಡುವುದು, ಸೇವೆಗಳ ಗುಣಮಟ್ಟ ಸುಧಾರಿಸುವುದು ಮತ್ತು ಜನಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಹೇಗೆ ಸಾಧ್ಯವೆಂಬುದನ್ನು ವಿವರಿಸುತ್ತದೆ. ಜೊತೆಗೆ, ಸಹಭಾಗಿತ್ವದ ಆಡಳಿತ ಮಾದರಿಯ ಅಗತ್ಯವನ್ನು ಒತ್ತಿಹೇಳುತ್ತದೆ. ಅಂತಿಮವಾಗಿ, ಇ–ಆಡಳಿತವು ಕೇವಲ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯಲ್ಲ; ಅದು ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಮಾತ್ರ ಸಾರ್ಥಕವಾಗುವ ಪ್ರಜಾಪ್ರಭುತ್ವದ ಸಾಧನವಾಗಿದೆ.

## KEYWORDS:

ಇ–ಆಡಳಿತ, ನಾಗರಿಕ ಸಮಾಜ, ಡಿಜಿಟಲ್ ಸಾಕ್ಷರತೆ, ಉತ್ತಮ ಆಡಳಿತ, ಡಿಜಿಟಲ್ ಅಂತರ.

**ಪೀಠಿಕೆ:**

ಇ–ಆಡಳಿತ ಎಂಬುದು ಸರ್ಕಾರದ ಸೇವೆಗಳು, ಮಾಹಿತಿ ಮತ್ತು ನಿರ್ಧಾರ ಪ್ರಕ್ರಿಯೆಗಳನ್ನು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ (ಐಸಿಟಿ) ಮೂಲಕ ನಾಗರಿಕರಿಗೆ ಸುಲಭವಾಗಿ, ವೇಗವಾಗಿ ಹಾಗೂ ಪಾರದರ್ಶಕವಾಗಿ ಒದಗಿಸುವ ವ್ಯವಸ್ಥೆಯಾಗಿದೆ. ಡಿಜಿಟಲ್ ಯುಗದಲ್ಲಿ ಸರ್ಕಾರ–ನಾಗರಿಕ ಸಂಬಂಧವು ಕೇವಲ ಕಚೇರಿ ಕಾರ್ಯವಿಧಾನಕ್ಕೆ ಸೀಮಿತವಾಗಿಲ್ಲ; ಅದು ಆನ್‌ಲೈನ್ ವೇದಿಕೆಗಳು, ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ಡಿಜಿಟಲ್ ಪೋರ್ಟಲ್‌ಗಳ ಮೂಲಕ ನಿರಂತರ ಸಂವಹನದ ರೂಪ ಪಡೆದಿದೆ. ಭಾರತದಲ್ಲಿ 2006ರಲ್ಲಿ ಆರಂಭವಾದ ನ್ಯಾಶನಲ್ ಇ–ಗವರ್ನೆನ್ಸ್ ಪ್ಲಾನ್ ಮತ್ತು 2015ರಲ್ಲಿ ಪ್ರಾರಂಭವಾದ ಡಿಜಿಟಲ್ ಇಂಡಿಯಾ ಯೋಜನೆಗಳು ಇ–ಆಡಳಿತಕ್ಕೆ ದಿಕ್ಕು ಮತ್ತು ವೇಗ ನೀಡಿವೆ.

ಈ ಪ್ರಕ್ರಿಯೆಯಲ್ಲಿ ನಾಗರಿಕ ಸಮಾಜ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ನಾಗರಿಕ ಸಮಾಜವು ಸ್ವಯಂಸೇವಾ ಸಂಘಟನೆಗಳು, ಎನ್.ಜಿ.ಓಗಳು, ಸಮುದಾಯ ಆಧಾರಿತ ಸಂಸ್ಥೆಗಳು, ಮಾಧ್ಯಮಗಳು ಮತ್ತು ಜಾಗೃತಿ ಚಳವಳಿಗಳನ್ನು ಒಳಗೊಂಡಿದ್ದು, ಸರ್ಕಾರ ಮತ್ತು ಜನರ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ. ಇ–ಆಡಳಿತದ ಸೇವೆಗಳು ಎಲ್ಲರಿಗೂ ತಲುಪಲು ಜಾಗೃತಿ, ಡಿಜಿಟಲ್ ಸಾಕ್ಷರತೆ ಮತ್ತು ಸಾಮಾಜಿಕ

ಪಾಲ್ಗೊಳ್ಳುವಿಕೆ ಅಗತ್ಯವಾಗಿದ್ದು, ಇವುಗಳನ್ನು ಉತ್ತೇಜಿಸುವಲ್ಲಿ ನಾಗರಿಕ ಸಮಾಜದ ಪಾತ್ರ ನಿರ್ಣಾಯಕವಾಗಿದೆ. ಅದರ ಮೂಲಕ ಇ-ಆಡಳಿತವು ಕೇವಲ ತಂತ್ರಜ್ಞಾನಾಧಾರಿತ ವ್ಯವಸ್ಥೆಯಾಗಿರದೆ, ಜನಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವದ ಸಾಧನವಾಗಿ ರೂಪುಗೊಳ್ಳುತ್ತದೆ. ಉತ್ತಮ ಆಡಳಿತದ ನವ ದಿಕ್ಕಾಗಿ ಇ-ಆಡಳಿತವು ನಾಗರಿಕ ಸಮಾಜದಲ್ಲಿ ಈ ಕೆಳಗಿನಂತೆ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

**1. ಜಾಗೃತಿ ನಿರ್ಮಾಣ ಮತ್ತು ಡಿಜಿಟಲ್ ಸಾಕ್ಷರತೆ**

ಇ-ಆಡಳಿತದ ಸೇವೆಗಳು ಎಲ್ಲ ವರ್ಗದ ಜನರಿಗೆ ಸಮಾನವಾಗಿ ತಲುಪಲು ಡಿಜಿಟಲ್ ಜ್ಞಾನ ಅತ್ಯಂತ ಅವಶ್ಯಕವಾಗಿದೆ. ಕೇವಲ ಆನ್‌ಲೈನ್ ಸೇವೆಗಳನ್ನು ಆರಂಭಿಸುವುದರಿಂದ ಸಾಕಾಗುವುದಿಲ್ಲ, ಜನರು ಅವುಗಳನ್ನು ಬಳಸುವ ಸಾಮರ್ಥ್ಯ ಹೊಂದಿರಬೇಕು. ವಿಶೇಷವಾಗಿ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಡಿಜಿಟಲ್ ಸಾಕ್ಷರತೆ ಕಡಿಮೆ ಇರುವುದರಿಂದ ನಾಗರಿಕ ಸಮಾಜದ ಪಾತ್ರ ಇಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ನಾಗರಿಕ ಸಮಾಜ ಸಂಘಟನೆಗಳು ಜನರಲ್ಲಿ ಜಾಗೃತಿ ಮೂಡಿಸಿ, ಇ-ಸೇವೆಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಮತ್ತು ತರಬೇತಿ ಶಿಬಿರಗಳನ್ನು ಆಯೋಜಿಸುವ ಮೂಲಕ ಡಿಜಿಟಲ್ ಸಾಕ್ಷರತೆಯನ್ನು ವಿಸ್ತರಿಸುತ್ತವೆ. ಮಹಿಳೆಯರು, ಹಿರಿಯರು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ತಂತ್ರಜ್ಞಾನ ಬಳಕೆಯ ಕುರಿತು ಮಾರ್ಗದರ್ಶನ ನೀಡುವುದು ಅವರ ಪ್ರಮುಖ ಕಾರ್ಯವಾಗಿದೆ.

ಇ-ಆಡಳಿತದ ಮೂಲ ಉದ್ದೇಶ ಸರ್ಕಾರದ ಸೇವೆಗಳು ಎಲ್ಲ ನಾಗರಿಕರಿಗೂ ಸಮಾನವಾಗಿ ಮತ್ತು ಸುಲಭವಾಗಿ ತಲುಪಿಸುವುದಾಗಿದೆ. ಆದರೆ ಡಿಜಿಟಲ್ ಸಾಧನಗಳನ್ನು ಬಳಸುವ ಜ್ಞಾನವಿಲ್ಲದಿದ್ದರೆ, ಆ ಸೇವೆಗಳ ಪ್ರಯೋಜನವನ್ನು ಜನರು ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಡಿಜಿಟಲ್ ಸಾಕ್ಷರತೆ ಇ-ಆಡಳಿತದ ಯಶಸ್ಸಿಗೆ ಮೂಲಭೂತ ಅಂಶವಾಗಿದೆ.

- ಜಾಗೃತಿ ನಿರ್ಮಾಣದಲ್ಲಿ ನಾಗರಿಕ ಸಮಾಜದ ಪಾತ್ರ: ನಾಗರಿಕ ಸಮಾಜವು ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಇ-ಸೇವೆಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ.
- ಆನ್‌ಲೈನ್ ಅರ್ಜಿಗಳು, ಡಿಜಿಟಲ್ ಪಾವತಿ, ಭೂ ದಾಖಲೆಗಳು, ಜನಧನ ಖಾತೆಗಳು, ಸಾಮಾಜಿಕ ಭದ್ರತಾ ಯೋಜನೆಗಳು ಇತ್ಯಾದಿ ಸೇವೆಗಳ ಬಗ್ಗೆ ಮಾಹಿತಿ ನೀಡುತ್ತದೆ.
- ಶಿಬಿರಗಳು, ಕಾರ್ಯಾಗಾರಗಳು ಮತ್ತು ಮನೆಮನೆಗೆ ಸಂಪರ್ಕದ ಮೂಲಕ ಜನರಿಗೆ ಇ-ಸೇವೆಗಳ ಉಪಯೋಗ ತಿಳಿಸುತ್ತದೆ.
- ಮಹಿಳೆಯರು, ಹಿರಿಯ ನಾಗರಿಕರು ಮತ್ತು ಸಾಕ್ಷರತೆಯ ಕೊರತೆಯುಳ್ಳವರಿಗೆ ವಿಶೇಷ ತರಬೇತಿ ನೀಡುತ್ತದೆ.

ಈ ರೀತಿಯ ಜಾಗೃತಿ ಕಾರ್ಯಕ್ರಮಗಳು ಡಿಜಿಟಲ್ ಅಂತರವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತವೆ.

- ಡಿಜಿಟಲ್ ಸಾಕ್ಷರತೆ ಹೆಚ್ಚಿಸುವಲ್ಲಿ ಪಾತ್ರ: ಡಿಜಿಟಲ್ ಸಾಕ್ಷರತೆ ಎಂದರೆ ಕಂಪ್ಯೂಟರ್, ಸ್ಮಾರ್ಟ್ಫೋನ್, ಇಂಟರ್ನೆಟ್ ಮತ್ತು ಆನ್‌ಲೈನ್ ಅಪ್ಲಿಕೇಶನ್‌ಗಳನ್ನು ಬಳಸುವ ಸಾಮರ್ಥ್ಯ. ನಾಗರಿಕ ಸಮಾಜದ ಸಂಘಟನೆಗಳು:
- ಮೂಲಭೂತ ಕಂಪ್ಯೂಟರ್ ತರಬೇತಿ

- ಆನ್‌ಲೈನ್ ಸೇವೆಗಳ ಬಳಕೆ ವಿಧಾನ
- ಸೈಬರ್ ಸುರಕ್ಷತೆ ಮತ್ತು ಡೇಟಾ ಗೌಪ್ಯತೆ ಕುರಿತು ಅರಿವು
- ಡಿಜಿಟಲ್ ಪಾವತಿ ವ್ಯವಸ್ಥೆಗಳ ಬಳಕೆ. ಇತ್ಯಾದಿಗಳನ್ನು ಕಲಿಸುತ್ತವೆ.

ಉದಾಹರಣೆ – ಅಕ್ಷಯ್ ಯೋಜನೆ : ಕೇರಳ ಸರ್ಕಾರ ಮತ್ತು ಸ್ಥಳೀಯ ಸಮುದಾಯದ ಸಹಭಾಗಿತ್ವದಲ್ಲಿ ಆರಂಭವಾದ ಅಕ್ಷಯ್ ಯೋಜನೆಯು ಗ್ರಾಮ ಮಟ್ಟದಲ್ಲಿ ಡಿಜಿಟಲ್ ಸಾಕ್ಷರತೆ ಹೆಚ್ಚಿಸಲು ಪ್ರಮುಖ ಪಾತ್ರ ವಹಿಸಿದೆ. ಮಹಿಳೆಯರು ಮತ್ತು ಯುವಕರಿಗೆ ಉದ್ಯೋಗಾವಕಾಶಗಳಿಗೂ ಮಾರ್ಗದರ್ಶನ ನೀಡುವ ಜೊತೆಗೆ ಇ-ಸೇವೆಗಳ ಬಳಕೆಗೆ ಅಗತ್ಯವಾದ ಮೂಲಭೂತ ಜ್ಞಾನ ಕಲಿಸಲಾಗುತ್ತದೆ. ಅಲ್ಲದೇ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಅಕ್ಷಯ ಕೇಂದ್ರಗಳನ್ನು ಸ್ಥಾಪಿಸಿ ಜನರಿಗೆ ಕಂಪ್ಯೂಟರ್ ತರಬೇತಿ ನೀಡಲಾಗುತ್ತದೆ. ಒಟ್ಟಾರೆಯಾಗಿ ಈ ಯೋಜನೆಯಿಂದ ಗ್ರಾಮೀಣ ಜನರು ಸರ್ಕಾರದ ಆನ್‌ಲೈನ್ ಸೇವೆಗಳನ್ನು ಸ್ವತಃ ಬಳಸುವ ಸಾಮರ್ಥ್ಯ ಪಡೆದಿದ್ದಾರೆ.

**2. ಸಾಮಾಜಿಕ ನಿಗಾವಳಿ ಮತ್ತು ಪಾರದರ್ಶಕತೆ**

ಸಾಮಾಜಿಕ ನಿಗಾವಳಿ ಮತ್ತು ಪಾರದರ್ಶಕತೆ ಇವು ಉತ್ತಮ ಆಡಳಿತದ ಮೂಲಭೂತ ತತ್ವಗಳಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಕಾರ್ಯವೈಖರಿ ಜನರಿಗೆ ಸ್ಪಷ್ಟವಾಗಿ ತಿಳಿದಿರಬೇಕು ಹಾಗೂ ಸಾರ್ವಜನಿಕ ಸಂಪನ್ಮೂಲಗಳ ಬಳಕೆ ಬಗ್ಗೆ ಜವಾಬ್ದಾರಿತ್ವ ಇರಬೇಕು. ಈ ದೃಷ್ಟಿಯಿಂದ ಸಾಮಾಜಿಕ ನಿಗಾವಳಿ ಎಂಬುದು ನಾಗರಿಕರು ಮತ್ತು ನಾಗರಿಕ ಸಂಘಟನೆಗಳು ಸರ್ಕಾರದ ನೀತಿಗಳು, ಯೋಜನೆಗಳು ಮತ್ತು ಸೇವೆಗಳ ಅನುಷ್ಠಾನವನ್ನು ಪರಿಶೀಲಿಸುವ ಪ್ರಕ್ರಿಯೆಯಾಗಿದೆ. ಇ-ಆಡಳಿತದ ಬೆಳವಣಿಗೆಯೊಂದಿಗೆ ಮಾಹಿತಿ ತಂತ್ರಜ್ಞಾನವು ಆಡಳಿತದ ಕಾರ್ಯವಿಧಾನವನ್ನು ಹೆಚ್ಚು ತೆರೆದ ಮತ್ತು ಸುಲಭವಾಗಿ ಲಭ್ಯವಾಗುವಂತೆ ಮಾಡಿದೆ. ಇಲಾಖೆಗಳ ವೆಬ್‌ಸೈಟ್‌ಗಳು, ಆನ್‌ಲೈನ್ ಪೋರ್ಟಲ್‌ಗಳು, ಮತ್ತು ಡಿಜಿಟಲ್ ದಾಖಲೆಗಳು ಸಾರ್ವಜನಿಕರಿಗೆ ಮಾಹಿತಿಯನ್ನು ತಲುಪಿಸುವಲ್ಲಿ ಪ್ರಮುಖ ಸಾಧನಗಳಾಗಿವೆ. ಇದರಿಂದ ನಾಗರಿಕರು ಸರ್ಕಾರದ ಕಾರ್ಯಗಳನ್ನು ವಿಶ್ಲೇಷಿಸಿ, ಅಗತ್ಯವಿದ್ದಲ್ಲಿ ಪ್ರಶ್ನಿಸುವ ಅವಕಾಶ ಪಡೆಯುತ್ತಾರೆ. ಹೀಗಾಗಿ, ಸಾಮಾಜಿಕ ನಿಗಾವಳಿ ಮತ್ತು ಪಾರದರ್ಶಕತೆ ಇವುಗಳು ಕೇವಲ ನಿಯಂತ್ರಣದ ಸಾಧನಗಳಲ್ಲ, ಅವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸುವ ಪ್ರಮುಖ ಅಂಶಗಳಾಗಿವೆ.

- ಡಿಜಿಟಲ್ ಸೇವೆಗಳ ಮೇಲ್ವಿಚಾರಣೆ: ಸರ್ಕಾರದ ವಿವಿಧ ಇ-ಸೇವೆಗಳು – ಆನ್‌ಲೈನ್ ಅರ್ಜಿ, ಸಬ್ಸಿಡಿ ವರ್ಗಾವಣೆ, ಕಲ್ಯಾಣ ಯೋಜನೆಗಳ ಅನುಷ್ಠಾನ—ಇವುಗಳ ಕಾರ್ಯಕ್ಷಮತೆಯನ್ನು ನಾಗರಿಕ ಸಂಘಟನೆಗಳು ಪರಿಶೀಲಿಸುತ್ತವೆ. ಸಾರ್ವಜನಿಕ ಡೇಟಾ, ಪೋರ್ಟಲ್‌ಗಳಲ್ಲಿ ಲಭ್ಯವಿರುವ ಮಾಹಿತಿ ಮತ್ತು ನಾಗರಿಕರ ಪ್ರತಿಕ್ರಿಯೆಗಳನ್ನು ಆಧರಿಸಿ ಸೇವೆಗಳ ಗುಣಮಟ್ಟವನ್ನು ವಿಶ್ಲೇಷಿಸುತ್ತವೆ. ಈ ಮೇಲ್ವಿಚಾರಣೆಯಿಂದ ತೊಂದರೆಗಳು, ವಿಳಂಬಗಳು ಮತ್ತು ಅನ್ಯಾಯಗಳು ಬಹಿರಂಗವಾಗುತ್ತವೆ.
- ಭ್ರಷ್ಟಾಚಾರ ನಿಯಂತ್ರಣ: ಇ-ಆಡಳಿತದ ಮೂಲಕ ಹಣಕಾಸು ವ್ಯವಹಾರಗಳು ಮತ್ತು ಆಡಳಿತ ಕ್ರಮಗಳು ಡಿಜಿಟಲ್ ದಾಖಲೆಗಳಲ್ಲಿ ಉಳಿಯುತ್ತವೆ. ಇದರಿಂದ ಅಧಿಕಾರ ದುರುಪಯೋಗ ಮತ್ತು ಮಧ್ಯವರ್ತಿಗಳ ಹಸ್ತಕ್ಷೇಪ ಕಡಿಮೆಯಾಗುತ್ತದೆ. ನಾಗರಿಕ ಸಮಾಜವು ಈ ಡೇಟಾವನ್ನು ಉಪಯೋಗಿಸಿ ಭ್ರಷ್ಟಾಚಾರದ ಪ್ರಕರಣಗಳನ್ನು ಹೊರತಂದು, ಸರ್ಕಾರವನ್ನು ಜವಾಬ್ದಾರಿಯುತವಾಗಿರಲು ಒತ್ತಾಯಿಸುತ್ತದೆ.

- ಮಾಹಿತಿ ಹಕ್ಕು ಮತ್ತು ಜಾಗೃತಿ: ಮಾಹಿತಿ ಹಕ್ಕು ಅಧಿನಿಯಮದ (2005) ಅನ್ವಯ ಮಾಹಿತಿ ಪಡೆಯುವ ಹಕ್ಕನ್ನು ಪ್ರತೀ ನಾಗರಿಕರಿಗೆ ಒದಗಿಸಿದ ಮಹತ್ವದ ಕಾನೂನು. ಇದರ ಪರಿಣಾಮಕಾರಿಯಾದ ಅನುಷ್ಠಾನಕ್ಕೆ ನಾಗರಿಕ ಸಂಘಟನೆಗಳು ಪ್ರಮುಖ ಪಾತ್ರ ವಹಿಸಿವೆ. ಇ–ಆಡಳಿತದ ಮೂಲಕ ಇಲಾಖೆಗಳ ವೆಬ್‌ಸೈಟ್‌ಗಳಲ್ಲಿ ಸ್ವಯಂ ಪ್ರಕಟಣೆ (ಸುಮೋಟೋ ಡಿಸ್‌ಕ್ಲೋಸರ್) ಹೆಚ್ಚಿರುವುದರಿಂದ, ಜನರಿಗೆ ಮಾಹಿತಿ ಸುಲಭವಾಗಿ ಲಭ್ಯವಾಗುತ್ತಿದೆ.
- ಸಾಮಾಜಿಕ ಪರಿಶೀಲನೆ: ಗ್ರಾಮೀಣ ಮತ್ತು ನಗರ ಯೋಜನೆಗಳ ಅನುಷ್ಠಾನದಲ್ಲಿ ನಾಗರಿಕ ಸಮಾಜವು ಸಾಮಾಜಿಕ ಪರಿಶೀಲನೆ ನಡೆಸಿ, ಯೋಜನೆಗಳ ವೆಚ್ಚ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುತ್ತದೆ. ಇ–ಪೋರ್ಟಲ್‌ಗಳಲ್ಲಿ ಲಭ್ಯವಿರುವ ಡೇಟಾವನ್ನು ಆಧರಿಸಿ ಪಾರದರ್ಶಕತೆ ಹೆಚ್ಚಿಸಲಾಗುತ್ತದೆ.
- ಜನರ ನಂಬಿಕೆ ಮತ್ತು ಪ್ರಜಾಪ್ರಭುತ್ವದ ಬಲಪಡಿಕೆ: ಮಾಹಿತಿ ಸುಲಭವಾಗಿ ಲಭ್ಯವಾಗುವುದು ಮತ್ತು ಆಡಳಿತದ ಕಾರ್ಯವೈಖರಿ ಸ್ಪಷ್ಟವಾಗಿರುವುದು ಜನರ ವಿಶ್ವಾಸವನ್ನು ಹೆಚ್ಚಿಸುತ್ತದೆ. ನಾಗರಿಕ ಸಮಾಜದ ಸಕ್ರಿಯ ಪಾಲ್ಗೊಳ್ಳುವಿಕೆ ಇ–ಆಡಳಿತವನ್ನು ಕೇವಲ ತಂತ್ರಜ್ಞಾನ ವ್ಯವಸ್ಥೆಯಾಗಿರದೆ, ಜನಪರ ಮತ್ತು ಜವಾಬ್ದಾರಿಯುತ ಆಡಳಿತ ಮಾದರಿಯನ್ನಾಗಿ ರೂಪಿಸುತ್ತದೆ.

ಹೀಗಾಗಿ, ಸಾಮಾಜಿಕ ನಿಗಾವಳಿ ಮತ್ತು ಪಾರದರ್ಶಕತೆಯ ದೃಷ್ಟಿಯಿಂದ ನಾಗರಿಕ ಸಮಾಜವು ಇ–ಆಡಳಿತದ ಅವಿಭಾಜ್ಯ ಅಂಗವಾಗಿದೆ. ಡಿಜಿಟಲ್ ವೇದಿಕೆಗಳ ಮೂಲಕ ಮಾಹಿತಿ ಲಭ್ಯವಾಗುವುದು, ಸಾಮಾಜಿಕ ಪರಿಶೀಲನೆ ನಡೆಸುವುದು ಮತ್ತು ಸರ್ಕಾರವನ್ನು ಜವಾಬ್ದಾರಿಯುತವಾಗಿರಲು ಒತ್ತಾಯಿಸುವುದು—ಇವೆಲ್ಲವೂ ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಪಡಿಸುತ್ತವೆ.

### 3. ನೀತಿ ರೂಪಣೆಯಲ್ಲಿ ಪಾಲ್ಗೊಳ್ಳುವಿಕೆ

ಇ–ಆಡಳಿತದ ಯುಗದಲ್ಲಿ ನೀತಿ ರೂಪಣೆ (ಪಾಲಿಸಿ ಫಾರ್ಮುಲೇಶನ್) ಪ್ರಕ್ರಿಯೆ ಕೇವಲ ಸರ್ಕಾರಿ ಇಲಾಖೆಗಳೊಳಗೆ ಸೀಮಿತವಾಗಿರುವುದಿಲ್ಲ, ಅದು ಜನಪಾಲ್ಗೊಳ್ಳುವಿಕೆಯ ಮೂಲಕ ಹೆಚ್ಚು ಸಮಗ್ರ ಮತ್ತು ಪಾರದರ್ಶಕವಾಗುತ್ತದೆ. ಡಿಜಿಟಲ್ ತಂತ್ರಜ್ಞಾನಗಳ ಅಭಿವೃದ್ಧಿಯಿಂದ ಸರ್ಕಾರವು ನಾಗರಿಕರೊಂದಿಗೆ ನೇರ ಸಂವಹನ ನಡೆಸುವ ಸಾಧ್ಯತೆ ಪಡೆದುಕೊಂಡಿದೆ. ಈ ಸಂದರ್ಭದಲ್ಲಿ ನಾಗರಿಕ ಸಮಾಜವು ಸರ್ಕಾರ ಮತ್ತು ಜನರ ನಡುವೆ ಪ್ರಮುಖ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಆನ್‌ಲೈನ್ ಸಮಾಲೋಚನೆ, ಇ–ಪ್ಲಾಟ್‌ಫಾರ್ಮ್‌ಗಳು, ಸಾಮಾಜಿಕ ಮಾಧ್ಯಮ ಚರ್ಚೆಗಳು ಮತ್ತು ಡಿಜಿಟಲ್ ಸಮೀಕ್ಷೆಗಳ ಮೂಲಕ ನಾಗರಿಕರು ತಮ್ಮ ಅಭಿಪ್ರಾಯಗಳನ್ನು ನೀತಿ ರೂಪಣಾ ಪ್ರಕ್ರಿಯೆಗೆ ನೀಡಲು ಸಾಧ್ಯವಾಗಿದೆ. ಉದಾಹರಣೆಗೆ, ಮೈಜಿಒವಿ (ಮೈ ಗವರ್ನಮೆಂಟ್) ವೇದಿಕೆ ನಾಗರಿಕರ ಸಲಹೆಗಳನ್ನು ಸಂಗ್ರಹಿಸಿ ಸರ್ಕಾರದ ಗಮನಕ್ಕೆ ತಲುಪಿಸುವ ಪ್ರಮುಖ ಸಾಧನವಾಗಿದೆ. ಇದರಿಂದ ನೀತಿಗಳು ಜನಪರವಾಗುವುದರೊಂದಿಗೆ ಪ್ರಜಾಪ್ರಭುತ್ವದ ಮೌಲ್ಯಗಳು ಬಲಪಡಿಸುತ್ತವೆ. ಹೀಗಾಗಿ, ಇ–ಆಡಳಿತದಲ್ಲಿ ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆ ನೀತಿ ರೂಪಣೆಯನ್ನು ಹೆಚ್ಚು ಜವಾಬ್ದಾರಿತ್ವಪೂರ್ಣ, ಸಮಾನತೆಯುತ ಮತ್ತು ಪರಿಣಾಮಕಾರಿಯಾಗಿಸುತ್ತದೆ.

- ಸಾರ್ವಜನಿಕ ಸಮಾಲೋಚನೆ: ಸರ್ಕಾರವು ಹೊಸ ಕಾನೂನುಗಳು, ಯೋಜನೆಗಳು

ಅಥವಾ ನೀತಿಗಳನ್ನು ರೂಪಿಸುವಾಗ ಸಾರ್ವಜನಿಕ ಸಮಾಲೋಚನೆ ನಡೆಸುತ್ತದೆ. ನಾಗರಿಕ ಸಂಘಟನೆಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ:

- ಜನರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತವೆ
- ತಜ್ಞರ ಸಲಹೆಗಳನ್ನು ಒದಗಿಸುತ್ತವೆ
- ನೀತಿಯ ಸಾಮಾಜಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತವೆ. ಇದರಿಂದ ನೀತಿಗಳು ಹೆಚ್ಚು ಜನಪರ ಹಾಗೂ ಪರಿಣಾಮಕಾರಿಯಾಗುತ್ತವೆ.
- ಆನ್‌ಲೈನ್ ಅಭಿಪ್ರಾಯ ಸಂಗ್ರಹ: ಡಿಜಿಟಲ್ ವೇದಿಕೆಗಳ ಮೂಲಕ ನಾಗರಿಕರ ಅಭಿಪ್ರಾಯಗಳನ್ನು ನೇರವಾಗಿ ಸರ್ಕಾರಕ್ಕೆ ತಲುಪಿಸುವ ಅವಕಾಶ ಸೃಷ್ಟಿಯಾಗಿದೆ. ಉದಾಹರಣೆಗೆ, ಮೈಜಿಒವಿ (ಮೈ ಗವರ್ನಮೆಂಟ್) ವೇದಿಕೆಯು ನಾಗರಿಕರಿಗೆ ವಿವಿಧ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ, ಸಲಹೆ ಮತ್ತು ಆಲೋಚನೆಗಳನ್ನು ಹಂಚಿಕೊಳ್ಳುವ ಅವಕಾಶ ನೀಡುತ್ತದೆ.
- ಸಮೀಕ್ಷೆಗಳು (ಸರ್ವೆಗಳು)
- ಚರ್ಚಾ ವೇದಿಕೆಗಳು (ಡಿಸ್ಕಷನ್ ಫೋರಂಗಳು)
- ಸೃಜನಾತ್ಮಕ ಸ್ಪರ್ಧೆಗಳು (ಐಡಿಯಾ ಕಾಂಪಿಟೇಷನ್ಸ್) ಇವುಗಳ ಮೂಲಕ ಸರ್ಕಾರ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ ನೀತಿ ರೂಪಣೆಯಲ್ಲಿ ಬಳಸುತ್ತದೆ.
- ಸಾಮಾಜಿಕ ಮಾಧ್ಯಮ ಚರ್ಚೆಗಳು: ಫೇಸ್‌ಬುಕ್, ಎಕ್ಸ್-ಖಾತೆ, ಯೂಟ್ಯೂಬ್ ಮುಂತಾದ ಸಾಮಾಜಿಕ ಮಾಧ್ಯಮಗಳು ಸಾರ್ವಜನಿಕ ಚರ್ಚೆಗಳ ಪ್ರಮುಖ ವೇದಿಕೆಗಳಾಗಿವೆ. ನಾಗರಿಕ ಸಮಾಜದ ಸಂಘಟನೆಗಳು ಈ ಮಾಧ್ಯಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತವೆ, ನೀತಿಗಳ ಲಾಭ-ನಷ್ಟಗಳನ್ನು ವಿವರಿಸುತ್ತವೆ, ಅಷ್ಟೇ ಅಲ್ಲದೇ ಸರ್ಕಾರದ ಗಮನವನ್ನು ಪ್ರಮುಖ ಸಮಸ್ಯೆಗಳತ್ತ ಸೆಳೆಯುತ್ತವೆ. ಇದರಿಂದ ನೀತಿ ರೂಪಣೆಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿತ್ವ ಹೆಚ್ಚುತ್ತದೆ.

**4. ಅಂತರವನ್ನು ಕಡಿಮೆ ಮಾಡುವುದು**

ಡಿಜಿಟಲ್ ಯುಗದಲ್ಲಿ ಇ-ಆಡಳಿತವು ಸರ್ಕಾರದ ಸೇವೆಗಳನ್ನು ವೇಗವಾಗಿ ಮತ್ತು ಪಾರದರ್ಶಕವಾಗಿ ಜನರಿಗೆ ತಲುಪಿಸುವ ಸಾಧನವಾಗಿದೆ. ಆದರೆ ತಂತ್ರಜ್ಞಾನ ಮತ್ತು ಇಂಟರ್ನೆಟ್ ಬಳಕೆಯಲ್ಲಿ ಸಮಾಜದ ಎಲ್ಲಾ ವರ್ಗಗಳಿಗೂ ಸಮಾನ ಅವಕಾಶ ಲಭ್ಯವಿಲ್ಲ. ನಗರ-ಗ್ರಾಮ, ಶ್ರೀಮಂತ-ಬಡವ, ಪುರುಷ-ಮಹಿಳೆ, ವಿದ್ಯಾವಂತ-ಅನಕ್ಷರಸ್ಥರ ನಡುವೆ ಕಂಡುಬರುವ ಈ ಅಸಮಾನತೆಯನ್ನು ಡಿಜಿಟಲ್ ಅಂತರ (ಡಿಜಿಟಲ್ ಡಿವೈಡ್) ಎಂದು ಕರೆಯಲಾಗುತ್ತದೆ. ಇ-ಆಡಳಿತದ ನಿಜವಾದ ಯಶಸ್ಸು ಈ ಅಂತರವನ್ನು ಕಡಿಮೆ ಮಾಡುವುದರಲ್ಲಿ ನಿಂತಿದೆ.

**ಡಿಜಿಟಲ್ ಅಂತರವು ವಿವಿಧ ರೂಪಗಳಲ್ಲಿ ಕಾಣಿಸುತ್ತದೆ:**

- ನಗರ-ಗ್ರಾಮ ಅಂತರ – ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಮತ್ತು ತಂತ್ರಜ್ಞಾನ ಸೌಲಭ್ಯಗಳ ಕೊರತೆ
- ಲಿಂಗ ಅಂತರ – ಮಹಿಳೆಯರಿಗೆ ಡಿಜಿಟಲ್ ಸಾಧನಗಳ ಪ್ರವೇಶ ಕಡಿಮೆ
- ಆರ್ಥಿಕ ಅಂತರ – ಬಡವರಿಗೆ ಸ್ಮಾರ್ಟ್‌ಫೋನ್ ಅಥವಾ ಡೇಟಾ ವೆಚ್ಚ ಭರಿಸುವಲ್ಲಿ ಕಷ್ಟ

- ಶೈಕ್ಷಣಿಕ ಅಂತರ – ಡಿಜಿಟಲ್ ಸಾಕ್ಷರತೆಯ ಕೊರತೆ. – ಈ ಅಸಮಾನತೆಗಳು ಇ–ಆಡಳಿತ ಸೇವೆಗಳ ಸಮಾನ ಪ್ರಯೋಜನವನ್ನು ತಡೆಯುತ್ತವೆ.

**ಈ ಕೆಳಗಿನ ಪ್ರಮುಖ ಅಂಶಗಳ ಮೂಲಕ ಡಿಜಿಟಲ್ ಅಂತರವನ್ನು ಕಡಿಮೆ ಮಾಡಬಹುದು.**

- ಮೂಲಸೌಕರ್ಯ ಅಭಿವೃದ್ಧಿ: ಗ್ರಾಮೀಣ ಪ್ರದೇಶಗಳಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕ, ಡಿಜಿಟಲ್ ಸೇವಾ ಕೇಂದ್ರಗಳು ಮತ್ತು ಇಂಟರ್ನೆಟ್ ಸೌಲಭ್ಯಗಳನ್ನು ವಿಸ್ತರಿಸುವುದು ಅಗತ್ಯ. ಭಾರತದಲ್ಲಿ 'ಭಾರತ್ ನೆಟ್' ಯೋಜನೆ ಗ್ರಾಮ ಪಂಚಾಯಿತಿಗಳ ಮಟ್ಟಕ್ಕೆ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ತಲುಪಿಸುವ ಮೂಲಕ ಡಿಜಿಟಲ್ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.
- ಸಾಮಾನ್ಯ ಸೇವಾ ಕೇಂದ್ರಗಳು: ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಡಿಜಿಟಲ್ ಸೇವೆಗಳನ್ನು ಒದಗಿಸಲು ಕಾಮನ್ ಸರ್ವೀಸ್ ಸೆಂಟರ್ (ಸಿಎಸ್‌ಸಿ) ಮಹತ್ವದ ಪಾತ್ರ ವಹಿಸುತ್ತಿವೆ. ಇವುಗಳ ಮೂಲಕ ನಾಗರಿಕರು ಆಧಾರ್ ಸೇವೆಗಳು, ಬ್ಯಾಂಕಿಂಗ್, ವಿದ್ಯಾಭ್ಯಾಸ, ಸರ್ಕಾರಿ ಅರ್ಜಿಗಳು ಮುಂತಾದ ಸೇವೆಗಳನ್ನು ಪಡೆಯಬಹುದು.
- ಡಿಜಿಟಲ್ ಸಾಕ್ಷರತೆ: ಡಿಜಿಟಲ್ ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯವಿಲ್ಲದಿದ್ದರೆ ಸೇವೆಗಳ ಲಾಭ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಡಿಜಿಟಲ್ ತರಬೇತಿ ಶಿಬಿರಗಳು, ಮಹಿಳಾ ಸ್ವಸಹಾಯ ಸಂಘಗಳ ತರಬೇತಿ, ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಅಗತ್ಯ.
- ಸಾಮಾಜಿಕ ಒಳಗೊಳ್ಳುವಿಕೆ: ಅಲ್ಪಸಂಖ್ಯಾತರು, ಅಂಗವಿಕಲರು ಮತ್ತು ಹಿಂದುಳಿದ ವರ್ಗಗಳಿಗೆ ವಿಶೇಷ ಯೋಜನೆಗಳು ರೂಪಿಸುವುದು ಡಿಜಿಟಲ್ ಅಂತರವನ್ನು ಕಡಿಮೆ ಮಾಡಲು ಸಹಕಾರಿ. ಸ್ಥಳೀಯ ಭಾಷೆಗಳಲ್ಲಿ ಸೇವೆಗಳನ್ನು ಒದಗಿಸುವುದು ಸಹ ಮಹತ್ವದ್ದು.

ಒಟ್ಟಾರೆಯಾಗಿ ಡಿಜಿಟಲ್ ಅಂತರವನ್ನು ಕಡಿಮೆ ಮಾಡದೆ ಇ–ಆಡಳಿತದ ಗುರಿಗಳನ್ನು ಸಂಪೂರ್ಣವಾಗಿ ಸಾಧಿಸಲು ಸಾಧ್ಯವಿಲ್ಲ. ತಂತ್ರಜ್ಞಾನ, ಮೂಲಸೌಕರ್ಯ, ಶಿಕ್ಷಣ ಮತ್ತು ಸಾಮಾಜಿಕ ಒಳಗೊಳ್ಳಿಕೆಯ ಸಮನ್ವಯದಿಂದ ಮಾತ್ರ ಎಲ್ಲರಿಗೂ ಸಮಾನ ಡಿಜಿಟಲ್ ಅವಕಾಶಗಳನ್ನು ಒದಗಿಸಬಹುದು. ಇದರಿಂದ ಇ–ಆಡಳಿತವು ನಿಜವಾದ ಸಮಾನತೆಯುತ ಮತ್ತು ಜನಪರ ಆಡಳಿತವಾಗಿ ರೂಪುಗೊಳ್ಳುತ್ತದೆ.

### 5. ಸೇವೆಗಳ ಪರಿಣಾಮಕಾರಿತ್ವ ಹೆಚ್ಚಿಸುವುದು

ಇ–ಆಡಳಿತದ ಪ್ರಮುಖ ಗುರಿ ಸರ್ಕಾರದ ಸೇವೆಗಳನ್ನು ವೇಗವಾಗಿ, ಪಾರದರ್ಶಕವಾಗಿ ಮತ್ತು ಜನಪರವಾಗಿ ತಲುಪಿಸುವುದಾಗಿದೆ. ಸೇವೆಗಳ ಪರಿಣಾಮಕಾರಿತ್ವ (ಎಫೆಕ್ಟಿವ್‌ನೆಸ್) ಎಂದರೆ ಸೇವೆಗಳು ಸಮಯಕ್ಕೆ ಸರಿಯಾಗಿ, ಕಡಿಮೆ ವೆಚ್ಚದಲ್ಲಿ, ಗುಣಮಟ್ಟದಿಂದ ಮತ್ತು ಜನರ ಅಗತ್ಯಗಳಿಗೆ ತಕ್ಕಂತೆ ಒದಗಿಸುವುದು. ಡಿಜಿಟಲ್ ತಂತ್ರಜ್ಞಾನಗಳ ಸಮರ್ಪಕ ಬಳಕೆ ಈ ಪರಿಣಾಮಕಾರಿತ್ವವನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

- ಪ್ರಕ್ರಿಯೆಗಳ ಸರಳೀಕರಣ: ಇ–ಆಡಳಿತವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ (ಐಸಿಟಿ) ಬಳಕೆಯ ಮೂಲಕ ಸರ್ಕಾರದ ಕಾರ್ಯವಿಧಾನವನ್ನು ಸುಗಮಗೊಳಿಸುವ ವ್ಯವಸ್ಥೆಯಾಗಿದೆ. ಪರಂಪರಾಗತವಾದ ಕಾಗದಾಧಾರಿತ ಆಡಳಿತದಲ್ಲಿ ವಿಳಂಬ, ಅಸ್ಪಷ್ಟತೆ ಮತ್ತು ಅನಗತ್ಯ ಹಂತಗಳು ಸಾಮಾನ್ಯವಾಗಿದ್ದವು. ಈ ಹಿನ್ನೆಲೆಯಲ್ಲಿ ಪ್ರಕ್ರಿಯೆಗಳ

ಸರಳೀಕರಣ (ಪ್ರೋಸಸ್ ಸಿಂಪ್ಲಿಫಿಕೇಶನ್) ಇ-ಆಡಳಿತದ ಪ್ರಮುಖ ಗುರಿಯಾಗಿದ್ದು, ಸೇವೆಗಳ ವೇಗ, ಪಾರದರ್ಶಕತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಪ್ರಕ್ರಿಯೆಗಳ ಸರಳೀಕರಣ ಎಂದರೆ ಆಡಳಿತಾತ್ಮಕ ಹಂತಗಳನ್ನು ಕಡಿಮೆ ಮಾಡಿ, ಅನಗತ್ಯ ದಾಖಲೆಗಳನ್ನು ನಿವಾರಿಸಿ, ಡಿಜಿಟಲ್ ವ್ಯವಸ್ಥೆಗಳ ಮೂಲಕ ವೇಗವಾಗಿ ಮತ್ತು ಸುಲಭವಾಗಿ ಸೇವೆಗಳನ್ನು ಒದಗಿಸುವುದು. ಇದರಲ್ಲಿ:

- ಅರ್ಜಿ ಸಲ್ಲಿಕೆ ಆನ್‌ಲೈನ್ ಮಾಡುವುದು
- ದಾಖಲೆಗಳ ಡಿಜಿಟಲ್ ಪರಿಶೀಲನೆ
- ಸ್ವಯಂಚಾಲಿತ ಅನುಮೋದನೆ ವ್ಯವಸ್ಥೆ
- ಒಂದೇ ಕಿಟಕಿಯ ಸೇವಾ ವ್ಯವಸ್ಥೆ – ಇವುಗಳು ಪ್ರಮುಖ ಅಂಶಗಳಾಗಿವೆ.

**ಪ್ರಕ್ರಿಯೆಗಳ ಸರಳೀಕರಣದ ಅಗತ್ಯತೆ :**

1. ವಿಳಂಬ ಕಡಿತ – ಕಾಗದಾಧಾರಿತ ಪ್ರಕ್ರಿಯೆಗಳು ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ. ಡಿಜಿಟಲ್ ವ್ಯವಸ್ಥೆಗಳು ಈ ವಿಳಂಬವನ್ನು ಕಡಿಮೆ ಮಾಡುತ್ತವೆ.
2. ಭ್ರಷ್ಟಾಚಾರ ನಿಯಂತ್ರಣ – ಅನಗತ್ಯ ಮಧ್ಯವರ್ತಿಗಳನ್ನು ದೂರ ಮಾಡುವುದರಿಂದ ಭ್ರಷ್ಟಾಚಾರದ ಅವಕಾಶ ಕಡಿಮೆಯಾಗುತ್ತದೆ.
3. ಪಾರದರ್ಶಕತೆ – ನಾಗರಿಕರು ತಮ್ಮ ಅರ್ಜಿಯ ಸ್ಥಿತಿಯನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಬಹುದು.
4. ವೆಚ್ಚ ಉಳಿತಾಯ – ಕಾಗದ, ಸಂಚಾರ ಮತ್ತು ಕಚೇರಿ ವೆಚ್ಚ ಕಡಿಮೆಯಾಗುತ್ತದೆ.

**ಡಿಜಿಟಲ್ ಉಪಕ್ರಮಗಳ ಪಾತ್ರ**

ಭಾರತದಲ್ಲಿ ಡಿಜಿಟಲ್ ಇಂಡಿಯಾ ಯೋಜನೆಯಡಿ ವಿವಿಧ ಸರ್ಕಾರಿ ಸೇವೆಗಳು ಆನ್‌ಲೈನ್ ಪೋರ್ಟಲ್‌ಗಳ ಮೂಲಕ ಲಭ್ಯವಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕಾಮನ್ ಸರ್ವೀಸ್ ಸೆಂಟರ್ಸ್‌ಗಳ ಮೂಲಕ ನಾಗರಿಕರು ಸುಲಭವಾಗಿ ಸೇವೆಗಳನ್ನು ಪಡೆಯುತ್ತಿದ್ದಾರೆ.

**ಉದಾಹರಣೆಗೆ:**

- ಆನ್‌ಲೈನ್ ಆದಾಯ, ಜಾತಿ ಮತ್ತು ನಿವಾಸ ಪ್ರಮಾಣಪತ್ರಗಳು
- ಡಿಜಿಟಲ್ ತೆರಿಗೆ ಪಾವತಿ
- ಇ–ಟೆಂಡರಿಂಗ್ ವ್ಯವಸ್ಥೆ
- ಆನ್‌ಲೈನ್ ದೂರು ನಿವಾರಣಾ ವ್ಯವಸ್ಥೆ ಇವುಗಳು ಪ್ರಕ್ರಿಯೆಗಳ ಸರಳೀಕರಣದ ಸ್ಪಷ್ಟ ಉದಾಹರಣೆಗಳಾಗಿವೆ.

ಇ–ಆಡಳಿತದಲ್ಲಿ ಪ್ರಕ್ರಿಯೆಗಳ ಸರಳೀಕರಣವು ಉತ್ತಮ ಆಡಳಿತದ (ಗುಡ್ ಗವರ್ನೆನ್ಸ್) ಪ್ರಮುಖ ಅಂಶವಾಗಿದೆ. ಅನಗತ್ಯ ಹಂತಗಳನ್ನು ಕಡಿಮೆ ಮಾಡಿ, ಡಿಜಿಟಲ್ ವ್ಯವಸ್ಥೆಗಳನ್ನು ಅಳವಡಿಸಿಕೊಂಡಾಗ ಸೇವೆಗಳ ಗುಣಮಟ್ಟ ಮತ್ತು ವೇಗ ಹೆಚ್ಚುತ್ತದೆ. ಇದರಿಂದ ಸರ್ಕಾರ ಮತ್ತು ನಾಗರಿಕರ ನಡುವೆ ವಿಶ್ವಾಸ ವೃದ್ಧಿಯಾಗಿ, ಆಡಳಿತ ವ್ಯವಸ್ಥೆ ಹೆಚ್ಚು ಜನಪರ ಮತ್ತು ಪರಿಣಾಮಕಾರಿಯಾಗುತ್ತದೆ.

ಏಕೀಕೃತ ಡಿಜಿಟಲ್ ವೇದಿಕೆಗಳು: ಇ–ಆಡಳಿತವು ಮಾಹಿತಿ ಮತ್ತು ಸಂವಹನ

ತಂತ್ರಜ್ಞಾನಗಳ ಮೂಲಕ ಸರ್ಕಾರದ ಸೇವೆಗಳನ್ನು ಜನರಿಗೆ ಸುಲಭವಾಗಿ ಮತ್ತು ವೇಗವಾಗಿ ತಲುಪಿಸುವ ವ್ಯವಸ್ಥೆಯಾಗಿದೆ. ಇ–ಆಡಳಿತದ ಯಶಸ್ಸಿಗೆ ಏಕೀಕೃತ ಡಿಜಿಟಲ್ ವೇದಿಕೆಗಳು (ಇಂಟಿಗ್ರೇಟೆಡ್ ಡಿಜಿಟಲ್ ಫ್ಲಾಟ್‌ಫಾರಂ) ಅತ್ಯಂತ ಪ್ರಮುಖವಾಗಿವೆ. ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಆನ್‌ಲೈನ್ ವೇದಿಕೆಯಲ್ಲಿ ಒದಗಿಸುವ ವ್ಯವಸ್ಥೆಯೇ ಏಕೀಕೃತ ಡಿಜಿಟಲ್ ವೇದಿಕೆ. ಇದರಿಂದ ನಾಗರಿಕರಿಗೆ ಹಲವು ಕಚೇರಿಗಳನ್ನು ಭೇಟಿ ಮಾಡುವ ಅಗತ್ಯವಿಲ್ಲದೆ ಒಂದೇ ಪೋರ್ಟಲ್ ಮೂಲಕ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಸಾಂಪ್ರದಾಯಿಕ ಆಡಳಿತದಲ್ಲಿ ಪ್ರತಿ ಇಲಾಖೆಯು ಪ್ರತ್ಯೇಕ ಕಾರ್ಯವಿಧಾನ ಹೊಂದಿರುತ್ತಿತ್ತು. ಇದರಿಂದ ನಾಗರಿಕರು ವಿವಿಧ ಕಚೇರಿಗಳ ನಡುವೆ ಸುತ್ತಾಡಬೇಕಾಗುತ್ತಿತ್ತು. ಏಕೀಕೃತ ವೇದಿಕೆಗಳು ಈ ಸಮಸ್ಯೆಯನ್ನು ಪರಿಹರಿಸುತ್ತವೆ.

- ಸೇವೆಗಳ ಸರಳೀಕರಣ
- ಸಮಯ ಮತ್ತು ವೆಚ್ಚ ಉಳಿತಾಯ
- ಪಾರದರ್ಶಕತೆ ಹೆಚ್ಚಳ
- ತ್ವರಿತ ಸೇವಾ ವಿತರಣೆಯ ಸಾಧ್ಯತೆ

**ಭಾರತದ ಉದಾಹರಣೆಗಳು**

- ಡಿಜಿಟಲ್ ಇಂಡಿಯಾ: ಡಿಜಿಟಲ್ ಇಂಡಿಯಾ ಯೋಜನೆಯಡಿ ವಿವಿಧ ಸರ್ಕಾರಿ ಸೇವೆಗಳನ್ನು ಆನ್‌ಲೈನ್ ಪೋರ್ಟಲ್‌ಗಳ ಮೂಲಕ ಒದಗಿಸಲಾಗುತ್ತಿದೆ. ಇದು ಡಿಜಿಟಲ್ ಮೂಲಸೌಕರ್ಯ ನಿರ್ಮಾಣ ಮತ್ತು ಸೇವೆಗಳ ಏಕೀಕರಣಕ್ಕೆ ಉತ್ತೇಜನ ನೀಡುತ್ತದೆ.
- ಸಾಮಾನ್ಯ ಸೇವಾ ಕೇಂದ್ರಗಳು: ಕಾಮನ್ ಸರ್ವೀಸ್ ಸೆಂಟರ್‌ಗಳು ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಕೇಂದ್ರದಲ್ಲಿ ಲಭ್ಯವಾಗುವಂತೆ ಮಾಡುತ್ತವೆ. ಇದರಿಂದ ಡಿಜಿಟಲ್ ಅಂತರ ಕಡಿಮೆಯಾಗುತ್ತದೆ.
- ಮೈ ಗವರ್ನಮೆಂಟ್ ವೇದಿಕೆ : ಮೈಜಿಓವಿ ನಾಗರಿಕರಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಮತ್ತು ಸರ್ಕಾರದ ಯೋಜನೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತದೆ. ಇದು ಆಡಳಿತ ಮತ್ತು ನಾಗರಿಕರ ನಡುವಿನ ಸಂವಹನವನ್ನು ಸುಗಮಗೊಳಿಸುತ್ತದೆ.

**ಏಕೀಕೃತ ವೇದಿಕೆಗಳ ಲಾಭಗಳು**

1. ಒಂದೇ ಲಾಗಿನ್ ವ್ಯವಸ್ಥೆ – ವಿವಿಧ ಸೇವೆಗಳಿಗೆ ಒಂದೇ ಖಾತೆ ಬಳಕೆ.
2. ಡೇಟಾ ಹಂಚಿಕೆ ಮತ್ತು ಸಮನ್ವಯ – ಇಲಾಖೆಗಳ ನಡುವೆ ಮಾಹಿತಿ ವಿನಿಮಯ ಸುಲಭ.
3. ರಿಯಲ್–ಟೈಮ್ ಟ್ರ್ಯಾಕಿಂಗ್ – ಅರ್ಜಿಗಳ ಸ್ಥಿತಿ ತಿಳಿದುಕೊಳ್ಳುವ ಅವಕಾಶ.
4. ಪಾರದರ್ಶಕತೆ ಮತ್ತು ಜವಾಬ್ದಾರಿತ್ವ – ಭ್ರಷ್ಟಾಚಾರ ಕಡಿಮೆಯಾಗುವುದು.

**ಉಪಸಂಹಾರ**

ಇ–ಆಡಳಿತವು 21ನೇ ಶತಮಾನದ ಪ್ರಜಾಪ್ರಭುತ್ವದ ಪ್ರಮುಖ ಆವಿಷ್ಕಾರಗಳಲ್ಲಿ ಒಂದಾಗಿದೆ. ಇದು ಕೇವಲ ತಂತ್ರಜ್ಞಾನ ಬಳಕೆಯ ಆಡಳಿತವಲ್ಲ, ಅದು ಜನರ ಪಾಲ್ಗೊಳ್ಳುವಿಕೆ, ಪಾರದರ್ಶಕತೆ ಮತ್ತು ಜವಾಬ್ದಾರಿತ್ವವನ್ನು ಉತ್ತೇಜಿಸುವ ಸಮಗ್ರ ವ್ಯವಸ್ಥೆಯಾಗಿದೆ. ಈ

ವ್ಯವಸ್ಥೆಯಲ್ಲಿ ನಾಗರಿಕ ಸಮಾಜದ ಪಾತ್ರ ಅತ್ಯಂತ ಮಹತ್ವದ್ದು. ಸರ್ಕಾರದ ಯೋಜನೆಗಳು ಮತ್ತು ಡಿಜಿಟಲ್ ಸೇವೆಗಳು ಜನರಿಗೆ ತಲುಪುವಲ್ಲಿ, ಅವುಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸುವಲ್ಲಿ ಮತ್ತು ಜನರ ಅಗತ್ಯಗಳನ್ನು ಆಡಳಿತದ ಗಮನಕ್ಕೆ ತರುವಲ್ಲಿ ನಾಗರಿಕ ಸಮಾಜ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ.

ನಾಗರಿಕ ಸಮಾಜವು ಜಾಗೃತಿ ನಿರ್ಮಾಣ, ಡಿಜಿಟಲ್ ಸಾಕ್ಷರತೆ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ನೀತಿ ರೂಪಣೆಯಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ ಇ–ಆಡಳಿತವನ್ನು ಜೀವಂತಗೊಳಿಸುತ್ತದೆ. ಡಿಜಿಟಲ್ ಅಂತರವನ್ನು ಕಡಿಮೆ ಮಾಡುವಲ್ಲಿ, ಹಿಂದುಳಿದ ವರ್ಗಗಳಿಗೆ ತಂತ್ರಜ್ಞಾನ ತಲುಪಿಸುವಲ್ಲಿ ಮತ್ತು ಮಹಿಳೆಯರು, ಗ್ರಾಮೀಣ ಜನತೆ, ಅಲ್ಪಸಂಖ್ಯಾತರು ಮುಂತಾದ ಸಮುದಾಯಗಳಿಗೆ ಸಹಾಯ ಮಾಡುವಲ್ಲಿ ಇದರ ಕೊಡುಗೆ ಅಮೂಲ್ಯವಾಗಿದೆ. ಇವುಗಳಿಲ್ಲದೆ ಇ–ಆಡಳಿತವು ಕೇವಲ ನಗರಕೇಂದ್ರಿತ ಅಥವಾ ಸೀಮಿತ ವರ್ಗಗಳಿಗೆ ಮಾತ್ರ ಪ್ರಯೋಜನಕಾರಿ ಆಗುವ ಸಾಧ್ಯತೆ ಇದೆ. ಹಾಗೆಯೇ, ನಾಗರಿಕ ಸಮಾಜವು ಸರ್ಕಾರದ ಕಾರ್ಯಕ್ಷಮತೆಯ ಮೇಲ್ವಿಚಾರಣೆ ಮಾಡುವ ಮೂಲಕ ಪಾರದರ್ಶಕತೆ ಮತ್ತು ಭ್ರಷ್ಟಾಚಾರ ನಿವಾರಣೆಗೆ ಸಹಕರಿಸುತ್ತದೆ. ದೂರು ನಿವಾರಣಾ ವ್ಯವಸ್ಥೆಗಳು, ಆನ್‌ಲೈನ್ ಪ್ರತಿಕ್ರಿಯೆಗಳು ಮತ್ತು ಸಾರ್ವಜನಿಕ ಸಮಾಲೋಚನೆಗಳ ಮೂಲಕ ಜನರ ಧ್ವನಿ ಆಡಳಿತದ ಕೇಂದ್ರಕ್ಕೆ ತಲುಪುತ್ತದೆ. ಇದರಿಂದ ಆಡಳಿತವು ಹೆಚ್ಚು ಜನಪರ, ಸಮಾನತೆಯುತ ಮತ್ತು ಪ್ರತಿಕ್ರಿಯಾಶೀಲವಾಗುತ್ತದೆ.

ಆದಾಗ್ಯೂ, ಡಿಜಿಟಲ್ ಸಾಕ್ಷರತೆಯ ಕೊರತೆ, ಮೂಲಸೌಕರ್ಯ ಸಮಸ್ಯೆಗಳು, ಸೈಬರ್ ಸುರಕ್ಷತೆ ಮತ್ತು ಸರ್ಕಾರ–ನಾಗರಿಕ ಸಮಾಜದ ನಡುವಿನ ಸಮನ್ವಯದ ಕೊರತೆ ಇತ್ಯಾದಿ ಸವಾಲುಗಳು ಇನ್ನೂ ಮುಂದುವರಿದಿವೆ. ಈ ಸವಾಲುಗಳನ್ನು ನಿವಾರಿಸಲು ಸರ್ಕಾರ, ಖಾಸಗಿ ವಲಯ ಮತ್ತು ನಾಗರಿಕ ಸಮಾಜಗಳ ನಡುವಿನ ಸಹಭಾಗಿತ್ವ ಅಗತ್ಯ. ಸಹಕಾರಾತ್ಮಕ ಆಡಳಿತ (ಕೊಲಾಬ್ರೇಟಿವ್ ಗವರ್ನೆನ್ಸ್) ಮಾದರಿಯು ಇ–ಆಡಳಿತವನ್ನು ಹೆಚ್ಚು ಬಲಪಡಿಸಬಹುದು.

ಅಂತಿಮವಾಗಿ, ಇ–ಆಡಳಿತದ ಯಶಸ್ಸು ತಂತ್ರಜ್ಞಾನದಲ್ಲಿ ಮಾತ್ರವಲ್ಲ, ಅದು ಜನರ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಜವಾಬ್ದಾರಿಯುತ ನಾಗರಿಕ ಸಮಾಜದ ಮೇಲೆ ಅವಲಂಬಿತವಾಗಿದೆ. ನಾಗರಿಕ ಸಮಾಜದ ಸಹಕಾರದಿಂದ ಇ–ಆಡಳಿತವು ನಿಜವಾದ ಡಿಜಿಟಲ್ ಪ್ರಜಾಪ್ರಭುತ್ವದ ರೂಪ ಪಡೆದು, ಸಮಾನತೆ, ನ್ಯಾಯ ಮತ್ತು ಉತ್ತಮ ಆಡಳಿತದ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

## ಪರಾಮರ್ಶನ ಗ್ರಂಥಗಳು:


1. Tapscott, D. (1996). Governance in the Digital Age (pp. 10–25, 100–115). McGraw–Hill.
2. Osborne, D., & Gaebler, T. (1992). Reinventing Government (pp. 30–58, 150–175). Addison–Wesley.
3. Dunleavy, P., Margetts, H., Bastow, S., & Tinkler, J. (2006). Digital Era Governance (pp. 25–49, 90–115). Oxford University Press.
4. Castells, M. (1996). The Network Society (pp. 1–27, 145–170). Blackwell.
5. Shafritz, J. M., & Hyde, A. C. (2004). Public Administration and Public Affairs (7th ed., pp. 80–105, 220–245). Pearson.
6. Keane, J. (1998). Civil Society (pp. 1–20, 110–130). Polity Press.
7. Putnam, R. D. (2000). Bowling Alone (pp. 19–55, 150–180). Simon & Schuster.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.